**<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>**

**ಸಿ.ಸಿ. ಸಂಖ್ಯೆಃ 3338/22**

**ಸಾಕ್ಷಿಯನ್ನು ದಿಃ 12.06.2023 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ರಾಜ | ಸಿ.ಡಬ್ಲ್ಯೂಃ 1 | ಪಿ.ಡಬ್ಲ್ಯೂಃ 2 |
| ತಂದೆಯ ಹೆಸರು | ಎಸ್ ರಾಮಣ್ಣ | | |
| ವಯಸ್ಸು | 53 ವರ್ಷ | | |
| ಕೆಲಸ | ಜೆರಾಕ್ಸ್ ಕಾಪಿಯಿಂಗ್ ವ್ಯವಹಾರ | | |
| ವಾಸಸ್ಥಳ | ಹುಣಸೂರು | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ದಿಃ 24.01.2017 ರಂದು ಮಂಗಳವಾರ ರಾತ್ರಿ 10.00 –10.30 ರ ಸವಯ ನಗರಸಭೆಯಿಂದ ನೀರು ಬಿಟ್ಟಾಗ ನನ್ನ ಮನೆ ಎದುರು ವಾಸಾವಾಗಿರುವ ಪ್ರಕಾಶ 1 ನೇ ಆರೋಪಿ ಅವರು ನೀರಿನ ವಿಚಾರವಾಗಿ ನನ್ನ ಜೊತೆ ಗಲಾಟೆ ಮಾಡಿದರು. ಸದರಿಯವರು ನೀರಿನ ಸಂಪರ್ಕವನ್ನು ಅಕ್ರಮವಾಗಿ ಪಡೆದಿದ್ದು, ಈ ವಿಚಾರವನ್ನು ಸದರಿ ಏರಿಯಾಕ್ಕೆ ನೀರು ಬಿಡುವ ಕೆಂಪಣ್ಣ ಅವರಿಗೆ ಹೇಳಿ ನೀರಿನ ಸಂಪರ್ಕ ನಗರಸಭೆಯವರು ತೆಗೆಸುತ್ತಾರೆ ಎಂದು 1 ನೇ ಆರೋಪಿ ಗಲಾಟೆ ಮಾಡಿದರು. ಆ ಸಮಯ ನಾನು ಹಾಗೂ ಚಾಸಾ–2 ರವರು ನೀರು ಹಿಡಿಯುವಾಗ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಅಂದರೆ ಅಶ್ಲೀಲ ಪದಗಳಿಂದ ಬೈದು, ನೀರಿನ ಸಂಪರ್ಕ ತೆಗೆಸಿದರೆ ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಕೊಲೆ ಬೆದರಿಕೆ ಹಾಕಿದರು. 1 ನೇ ಆರೋಪಿ ಹೆಂಡತಿ 2 ನೇ ಆರೋಪಿ ವಿಜಿ ಅವರು ನಮ್ಮ ಯಜಮಾನರು ಮೊದಲೆ ಕೊಲೆ ಮಾಡಿ ಬಂದಿದ್ದಾರೆ ಈಗ ನಿಮ್ಮನ್ನು ಕೊಲೆ ಮಾಡದೆ ಬಿಡುವುದಿಲ್ಲ, ಎಂದು 1 ನೇ ಆರೋಪಿ ಹೇಳಿದರು. ಆಗ 1 ನೇ ಆರೋಪಿ 2 ನೇ ಆರೋಪಿಗೆ ಮಚ್ಚು ತೆಗೆದುಕೊಂಡು ಬಾ ಎಂದು ಹೇಳಿದರು. ಪಕ್ಕದ ಮನೆಯವರಾದ 1 ನೇ ಆರೋಪಿ ನಫೀಜಾ ಇವರದ್ದು ಒಂದೇ ಕುಟುಂಬ ಇವರನ್ನು ಮುಗಿಸಿ ಎಂದು ಪ್ರಚೋದನೆ ಮಾಡಿದರು. ಅಲ್ಲಿ ಸುಮಾರು ಜನ ಸೇರಿಕೊಂಡರು.

ನಂತರ ಈ ಬಗ್ಗೆ ನನ್ನ ತಮ್ಮ ಆರ್ ರವಿ ದಿಃ 25.01.2017 ರಂದು ದೂರು ನೀಡಿರುತ್ತಾರೆ. ಸದರಿ ದೂರಿನಲ್ಲಿ ನನ್ನ ಸಹಿ ಇರುವುದಿಲ್ಲ. ಸದರಿ ದೂರನ್ನು ಪೊಲೀಸರು ಸ್ವೀಕರಿಸದೆ ಇರುವುದರಿಂದ ನಾನು ಪುನಃ ದಿಃ 28.01.2017 ರಂದು ಪೊಲೀಸರಿಗೆ ದೂರು ನೀಡಿರುತ್ತಾರೆ.

**ಸದರಿ ದೂರಿನ ಜೆರಾಕ್ಸ್ ಪ್ರತಿ ಕಡತದಲ್ಲಿ ಇದುದ್ದದರಿಂದ ದೃಢೀಕೃತ ನಕಲನ್ನು ಹಾಜರುಪಡಿಸಲು ನಿರ್ದೇಶನ ನೀಡಿ ವಿಚಾರಣೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ. ಎಂ. ಎಫ್. ಸಿ., ಹುಣಸೂರು.